C.C. No.- 2062/2023
CW-2/ PW-1

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಗಂಗಾವತಿ

ಸಾಕ್ಷಿಯನ್ನು ದಿನಾಂಕ- 22.04.2025 ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಮೊಹಮ್ಮದ್ ಅಕ್ಬರ |
| ತಂದೆ / ಗಂಡನ ಹೆಸರು- | ಮೈಬೂಬಸಾಬ |
| ವಯಸ್ಸು- | 39 ವರ್ಷಗಳು |
| ಉದ್ಯೋಗ- | ಬ್ಯಾಟರಿ ಕೆಲಸ |
| ವಾಸಸ್ಥಳ- | ಗಂಗಾವತಿ |

ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-

ನನಗೆ ಚಾಸಾ-1, 3 ರಿಂದ 7 ಗೊತ್ತಿಲ್ಲ. ಆರೋಪಿಯ ಪರಿಚಯ ಇರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈಗ ಸುಮಾರು 2-3 ವರ್ಷಗಳ ಹಿಂದೆ ನಾನು ಗಂಗಾವತಿ ನಗರ ಪೊಲೀಸ ಠಾಣೆಗೆ ಹೋಗಿದ್ದಾಗ ಪೊಲೀಸರು ಒಂದು ದಾಖಲೆ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಗೆ ದಾಳಿ ಪಂಚನಾಮೆಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ಯಾವುದೇ ಪಂಚನಾಮೆ ಮಾಡಿ ಯಾವುದೇ ವಸ್ತು ಜಪ್ತು ಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸಸಅ ರವರಿಂದಃ</u>

ದಿಃ 26-01-2023 ರಂದು ಚಾಸಾ-5 ರವರ ಕರೆಯ ಮೇರೆಗೆ ನಾನು ಮತ್ತು ಚಾಸಾ-3 ಚಾಸಾ-1 ರವರ ಮುಂದೆ ಹಾಜರಾದೆವು ಎಂದರೆ ಸರಿಯಲ್ಲ. ನಮಗೆ ಚಾಸಾ-1 ರವರು ಗಂಗಾವತಿ ನಗರದ ಬಿ.ಎಸ್.ಎನ್.ಎಲ್. ಆಫೀಸ್ ಹತ್ತಿರ ಅಕ್ರಮವಾಗಿ ಟ್ರಾಕ್ಟರ ಟ್ರೇಲರ್ ನಲ್ಲಿ ಕಳ್ಳತನದಿಂದ ಮರಳು ಸಾಗಿಸುತ್ತಿದ್ದಾರೆ ಅಂತಾ ತಮಗೆ ಬಂದಂತ ಬಾತ್ಮಿ ವಿಚಾರವನ್ನು ನಮಗೆ, ಚಾಸಾ-4 ರಿಂದ 7 ರವರಿಗೆ ತಿಳಿಸಿ ನಮ್ಮನ್ನು ಪಂಚರಾಗಿ ಸಹಕರಿಸುವಂತೆ ಕೇಳಿದ್ದರಿಂದ ನಾವು ಒಪ್ಪಿ ಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ನಾವು ಮತ್ತು ಪೊಲೀಸರು ಇಲಾಖಾ ವಾಹನದಲ್ಲಿ ಠಾಣೆಯಿಂದ ಹೊರಟು ಎ.ಪಿ.ಎಂ.ಸಿ. 2 ನೇ ಗೇಟ್ ಮೂಲಕ ಹೋಗಿ ಬಿ.ಎಸ್.ಎನ್.ಎಲ್. ಆಪೀಸ್ ಕಡೆ ಹೋದಾಗ ಅಲ್ಲಿ ಮರಳು ತುಂಬಿದ ಒಂದು ಟ್ರಾಕ್ಟರ ನಿಂತಿದ್ದು ಕಂಡುಬಂತು ಎಂದರೆ ಸರಿಯಲ್ಲ. ಅದರ ಟ್ರಾಕ್ಟರ ಚಾಲಕ ಪೊಲೀಸ್ ಜೀಪನ್ನು ನೋಡಿ ಟ್ರಾಕ್ಟರ ಬಿಟ್ಟು ಓಡಿ ಹೋಗಲು ಪ್ರಯತ್ನಿಸಿದ್ದು ಅವನನ್ನು ಹಿಡಿದೆವು ಎಂದರೆ ಸರಿಯಲ್ಲ. ಅವನ ಹೆಸರು ಕೇಳಲಾಗಿ ಅಹ್ಮದ್ ಸಾಬ ತಂದೆ ಹುಸೇನಸಾಬ ಸಾಃ ಮಿಠಾಯಿಗಾರ ಓಣಿ ಗಂಗಾವತಿ ಅಂತಾ ತಿಳಿಸಿದ ಎಂದರೆ ಸರಿಯಲ್ಲ. ಮರಳು ಹೊಂದಲು ಅನುಮತಿ ಇದೆಯಾ ಅಂತಾ ಕೇಳಲಾಗಿ ಯಾವುದೇ ಅನುಮತಿ ಇಲ್ಲ ಅಂತಾ ತಿಳಿಸಿದ ಟ್ರಾಕ್ಟರ ಪರಿಶೀಲಿಸಿ ನೊಡಲಾಗಿ ಅದನ್ನು ಮಹೇಂದ್ರು ಕಂಪನಿಯ ಟ್ರಾಕ್ಟರ ಇದ್ದು ಅದರ ನಂಬರ ಕೆಎ-37/ಟಿ.ಎ.8272 ಇದ್ದು ಅದು ಕೆಂಪು ಬಣ್ಣದು ಇತ್ತು ಎಂದರೆ ಸರಿಯಲ್ಲ. ಅದರ ಟ್ರೇಲರಗೆ ನಂಬರ ಕೆಎ-37/ಬಿ-4735 ಇರುತ್ತದೆ ಎಂದರೆ ಸರಿಯಲ್ಲ. ಟ್ರೇಲರನಲ್ಲಿ ಸುಮಾರು ರೂ.1,00,000/- ಬೆಲೆ ಬಾಳುವ ಮರಳು ಇತ್ತು

ಎಂದರೆ ಸರಿಯಲ್ಲ. ಅದರ ಮಾಲೀಕ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದರಿಂದ ಪೊಲೀಸರು ನಮ್ಮ ಸಮಕ್ಷಮ ಅದನ್ನು ಜಪ್ತು ಪಡಿಸಿಕೊಂಡು ಸ್ಥಳದಲ್ಲಿ 3-00 ರಿಂದ 4-00 ಗಂಟೆ ವರೆಗೆ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಸಮಕ್ಷಮ ದಾಳಿ ಮಾಡಿ ಪಂಚನಾಮೆ ಜರುಗಿಸಿದ್ದರೂ ಕೂಡ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು-

ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದು ಪಾಟೀಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಗಂಗಾವತಿ